ನಮ್ಮ ಕಥೆ–ನಿಮ್ಮ ಚಿತ್ರಗಳು

# ಜೀವ ತುಂಬಿದ ಗೆಳತಿಯರು

ರಚನೆ: ಶಿವಾನಂದ ಹೊಂಬಳ

ವನಜ, ಆರತಿ ಜೀವದ ಗೆಳತಿಯರು. ಇಬ್ಬರಿಗೂ ಈಗ ಸುಮಾರು ಎಂಟು ವರ್ಷ ವಯಸ್ಸು. ಒಂದೇ ಶಾಲೆಯಲ್ಲಿ ಓದುತ್ತಿದ್ದಾರೆ. ಅದೊಂದು ಭಾನುವಾರ. ಮನೆಯ ಮುಂದಿನ ಹುಲ್ಲುಹಾಸಿನಲ್ಲಿ ಆಟ ಆಡಲು ಹೋದರು. ''ಏನ್ ಆಡೋಣವೆ?'' ವನಜ ಕೇಳಿದಳು. ಆಲೋಚನೆ ಮಾಡುತ್ತಲೇ ಆರತಿ, ''ಹಕ್ಕಿಗೂಡು ಕಟ್ಟೋಣವಾ?'' ಎಂದು ಉತ್ತರಿಸಿದಳು. ''ಹೂಂ! ಒಳ್ಳೇ ಐಡಿಯಾ ಕಣೇ'' ಎಂದು ವನಜ ಹೇಳಿದಳು.

ಇಬ್ಬರೂ ಸೇರಿ ಹುಲ್ಲುಹಾಸಿನಲ್ಲಿದ್ದ ಸ್ವಲ್ಪ ಹುಲ್ಲನ್ನು ಕಿತ್ತುಕೊಂಡರು. ಅಲ್ಲೇ ಮರಗಳ ಕೆಳಗೆ ಎಲೆಗಳು ಬಿದ್ದಿದ್ದವು. ಅವುಗಳನ್ನು ಎತ್ತಿಕೊಂಡರು. ಕೆಲವು ಸಣ್ಣಪುಟ್ಟ ಕಡ್ಡಿಗಳು ಅಲ್ಲಿದ್ದವು. ಅವುಗಳನ್ನೂ ತೆಗೆದುಕೊಂಡರು.

ಅವೆಲ್ಲವನ್ನೂ ಉಪಯೋಗಿಸಿ ಗೋಡೆಯ ಪಕ್ಕ ಒಂದು ಗೂಡು ಕಟ್ಟಿದರು. ಯಾವುದಾದರೂ ಹಕ್ಕಿಗಳು ಬರುತ್ತವೆ, ಅಲ್ಲಿ ಮೊಟ್ಟೆ ಇಡುತ್ತವೆ; ಕಾವು ಕೊಡುತ್ತವೆ; ಮರಿಗಳನ್ನು ಮಾಡುತ್ತವೆ ಎಂದು ಭಾರೀ ಆಸೆಪಟ್ಟರು. ಮನೆಗಳಿಂದ ಕಾಳು ತಂದರು. ಗೂಡಿನ ಹತ್ತಿರ ಹರಡಿದರು. ಒಂದು ಕೊಬ್ಬರಿ ಚಿಪ್ಪಿನಲ್ಲಿ ನೀರು ತಂದರು. ಅದನ್ನೂ ಗೂಡಿನ ಬಳಿ ಇಟ್ಟರು.

ಯಾವ ಹಕ್ಕಿಯೂ ಬರಲಿಲ್ಲ. ''ಹತ್ತಿರ ಇದ್ದರೆ ಹಕ್ಕಿಗಳಿಗೆ ಭಯ ಆಗಬಹುದು, ಅಲ್ಲವಾ?'' ಎಂದು ಕಾಳಜಿಯಿಂದ ನುಡಿದಳು ವನಜ. ''ನಂಗೂ ಹಾಗೇ ಅನಿಸುತ್ತೆ ಕಣೆ. ದೂರ ಕೂಡೋಣ, ಬಾ'' ಎಂದು ಆರತಿ ಸಮ್ಮತಿಸಿದಳು. ಹಕ್ಕಿಗಾಗಿ ಅಲ್ಲೇ ಕಾಯುತ್ತ ಕುಳಿತರು. ಯಾವ ಹಕ್ಕಿಯೂ ಗೂಡಲ್ಲಿ ಮೊಟ್ಟೆ ಇಡಲು ಬರುತ್ತಿಲ್ಲ! ಕಾದು ಕಾದು ಬೇಸರವಾಯಿತು.  ಅಂತೂ ಕೊನೆಗೆ ಅವರಿಗೇ ಒಂದು ಉಪಾಯ ಹೊಳೆಯಿತು.!!

''ಏಯ್, ಯಾವ ಹಕ್ಕೀನೂ ಬರಲಿಲ್ಲ..... ಏನಾದರೂ ನಾವೇ ಮಾಡೋಣಾ?!'' ಆರತಿ ಕೇಳಿದಳು. ''ಹೂಂ! ಈ ಗೂಡನ್ನ ನಾವೇ ಮನೆ ಮಾಡಿಕೊಂಡು ಬಿಡೋಣ.'' ವನಜ ಸಲಹೆ ಕೊಟ್ಟಳು.

ಇಬ್ಬರಿಗೂ ಉಪಾಯ ಒಪ್ಪಿಗೆಯಾಯಿತು. ಕೂಡಲೇ ಮನೆಗೆ ಓಡಿದರು. ಅಮ್ಮಂದಿರು ಹೆಣೆದಿದ್ದ ವಾಯರ್ ಗೊಂಬೆಗಳನ್ನು ತಂದರು. ಗೂಡಿನಲ್ಲಿ ಇಟ್ಟರು...... ಸಂಜೆಯವರೆಗೂ ಆಡಿಯೇ ಆಡಿದರು. ಮದುವೆ, ಮಕ್ಕಳು, ಶಾಲೆ, ಟೀಚರ್ ಎಲ್ಲರೂ ಅಲ್ಲಿ ಹುಟ್ಟಿಕೊಂಡರು. ಅವರಿಗೆಲ್ಲ ಆ ಗೂಡೇ ಮನೆಯಾಯಿತು! ಶಾಲೆಯಾಯಿತು!! ಗುಡಿಯಾಯಿತು, ಗುಂಡಾರವಾಯಿತು!!! ಅಂತೂ ತಾವು ಕಟ್ಟಿದ ಗೂಡಲ್ಲಿ ಅವರು ಒಂದು ಜಗತ್ತನ್ನೇ ಸೃಷ್ಟಿಸಿದ್ದರು. ಅಲ್ಲಿನ ಹುಲ್ಲು, ಕಲ್ಲು, ಮಣ್ಣು, ಕಡ್ಡಿ, ಎಲೆ, ಗೊಂಬೆ ಎಲ್ಲವುಗಳಿಗೂ ಅವರು ಜೀವ ತುಂಬಿದ್ದರು. *

**ಶಿಕ್ಷಕರಲ್ಲಿ ನಿವೇದನೆ:**

* ಈ ವಿಶಿಷ್ಟ ಚಿತ್ರಕಥಾಪಟವನ್ನು ಮಕ್ಕಳಿಗೆ ಮೂರು–ನಾಲ್ಕು ಸಲ ಓದಿ ಹೇಳಿರಿ. ಕಥೆಯ ಬಗ್ಗೆ ಚರ್ಚೆ ನಡೆಯಲಿ.
* ಅನಂತರ ಮೂರು ಮಕ್ಕಳಿಗೆ ಒಂದರಂತೆ ಗುಂಪುಗಳನ್ನು ಮಾಡಿ.
* ಪ್ರತಿ ಗುಂಪಿಗೆ ಒಂದೊಂದು 'ನಮ್ಮಕಥೆ–ನಿಮ್ಮಚಿತ್ರ'ಪಟವನ್ನು ಕೊಡಿ.
* ಮಕ್ಕಳು ಅಲ್ಲಿರುವ ಕಥಾಭಾಗಕ್ಕೆ ಸೂಕ್ತವಾದ ಚಿತ್ರ ಬಿಡಿಸಲು ತಿಳಿಸಿ.
* ಅನಂತರ ಕ್ರೇಯಾನ್ ಅಥವಾ ಬಣ್ಣದ ಪೆನ್ಸಿಲ್ ಉಪಯೋಗಿಸಿ, ಬಣ್ಣ ಹಚ್ಚಲು  ಹೇಳಿರಿ.

ಜನವರಿ – ಫೆಬ್ರವರಿ – ಮಾರ್ಚ್ ೨೦೧೯–೨೦

ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
Dhwani Educational Resource Centre

ಆರಂಭ ಯೋಜನೆ
Arambha 2019-20 Project
is Supported by Many
Individual Donors

ಗಮನಿಸಿ : ಈ ಶೈಕ್ಷಣಿಕ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೇ ವಾಣಿಜ್ಯ ಉದ್ದೇಶಗಳಿಗಾಗಿ ಪುನರ್ಮುದ್ರಿಸುವುದಾಗಲೀ, ಬಳಸಿಕೊಳ್ಳುವುದಾಗಲೀ ನಿಷಿದ್ಧ. ಶೈಕ್ಷಣಿಕ ಉದ್ದೇಶದಿಂದ ಶಿಕ್ಷಕರು, ಪಾಲಕರು, ಸಂಪನ್ಮೂಲ ವ್ಯಕ್ತಿಗಳು ಇದನ್ನು ಉಪಯೋಗಿಸುವುದಾದರೆ ಧ್ವನಿ ಶೈ.ಸಂ.ಕೇಂದ್ರದ ಗಮನಕ್ಕೆ ತರವುದು ಅಪೇಕ್ಷಣೀಯ.

**ಸಂಪರ್ಕ ಮಾಹಿತಿ**
ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
# 76, 'ಪುಷ್ಪಾಂಜಲಿ' 3ನೇ ಅಡ್ಡರಸ್ತೆ
ಶಿವಗಿರಿ, ಧಾರವಾಡ–580007
ಮೊ. 9986661055
dhwanitrust@gmail.com
www.dhwanitrust.org